ಸಿಸಿ ನಂ. 10/2022
ಪಿ.ಡಬ್ಲ್ಯೂ: 1

ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ ನ್ಯಾಯಾಲಯ, ಸಿಂದಗಿ.

| | | |
|---|---|---|
| ಸಾಕ್ಷಿದಾರನ ಹೆಸರು | : | ಶ್ರೀಮಂತ ಖಂಡೇಕರ್ |
| ತಂದೆ ಹೆಸರು | : | ಸಿಧ್ರಾಮ |
| ವಯಸ್ಸು | : | 56 ವರ್ಷ |
| ಉದ್ಯೋಗ | : | ಎ.ಎಸ್.ಐ. |
| ವಾಸ ಸ್ಥಳ | : | ಸಿಂದಗಿ |

ದಿನಾಂಕ 17-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.
ದಂಡ ಪ್ರಕ್ರಿಯ ಸಂಹಿತೆ ಕಲಂ 299 ರನ್ವಯ ಸಾಕ್ಷಿಯ ಹೇಳಿಕೆ

**ಮುಖ್ಯ ವಿಚಾರಣೆ: ಸರಕಾರಿ ಸಹಾಯಕ ಅಭಿಯೋಜಕ ರವರಿಂದ.**

ನಾನು ಸಿಂದಗಿ ಪೊಲೀಸ್ ಠಾಣೆಯಲ್ಲಿ ಎ.ಎಸ್.ಐ. ಎಂದು 2021 ರಿಂದ ಇಲ್ಲಿಯ ವರೆಗೆ ಕರ್ತವ್ಯ ನಿರ್ವಹಿಸಿದ್ದೇನೆ.

ಸಿ.ಸಿ.ನಂ.10/2022 ರಲ್ಲಿ ಈ ನ್ಯಾಯಾಲಯವು ಆರೋಪಿತರ ವಿರುದ್ಧ ಉದ್ಘೋಷಣೆ ವಾರೆಂಟ್, ಜಪ್ತಿ ವಾರಂಟ್ ಹೊರಡಿಸಿತ್ತು. ಆ ಪ್ರಕಾರ ಆರೋಪಿ ನಂ.3 ರಿಂದ 8 ರವರ ವಿರುದ್ಧದ ಉದ್ಘೋಷಣೆಯನ್ನು ದಿ.28-12-2024 ರಂದು ಗ್ರಾಮ ಪಂಚಾಯತ ಕಾರ್ಯಾಲಯ ಮೇಳಕುಂದ ತಾಲೂಕಾ ಬಾಲಕಿ, ಹಣುಮದೇವರ ಗುಡಿ ಮಳಕುಂದ, ದಲ್ಲಿ ಪಂಚರ ಸಮಕ್ಷಮ ಅಂಟಿಸಿ ಮಹಜರ ಮಾಡಿರುತ್ತೇನೆ. ಆ ಕಾಲಕ್ಕೆ ಫೊಟೊ ತೆಗೆದಿರುತ್ತೇನೆ. 06 ಉದ್ಘೋಷಣೆ ವಾರೆಂಟ್ ನ್ನು ಗುರುತಿಸಿದ್ದು, ಅದನ್ನು ಕ್ರಮವಾಗಿ ನಿ.ಪಿ.2 ರಿಂದ 7 ಎಂದು, ಮಹಜರ ನ್ನು ನಿ.ಪಿ.8 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.8 ಎ ಎಂದು ಗುರುತಿಸಲಾಯಿತು. ಫೋಟೊವನ್ನು ನಿ.ಪಿ.9 ರಿಂದ 10 ಎಂದು ಗುರುತಿಸಲಾಯಿತು. ಈ ಬಗ್ಗೆ ವರದಿಯನ್ನು ನಿ.ಪಿ.11 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.11 ಎ ಎಂದು ಗುರುತಿಸಲಾಯಿತು.

ಮರು ವಿಚಾರಣೆ: ಇಲ್ಲ.

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**
**ಓ.ಹೆ.ಕೆ.ಸರಿ. ಅದೇ**

ಪ್ರಧಾನ ಹಿರಿಯ ಸಿವ್ಹಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ. ಸಿಂದಗಿ